ಮಾತಾಡಿಸಿಬಿಟ್ಟೆ... ಈಗ ಯಾಕಾದರೂ ಮಾತನಾಡಿಸಿದೆ ಎನ್ನುವಂತಾಗಿದೆ.

'ನಿನಗೆ ಮಾತಾಡೋಕೆ ಆಗ್ತ ಇಲ್ಲ ಅಲ್ವ...' ಜೋರಾಗಿ ನಕ್ಕಳು. 'ಇರಲಿ ಬಿಡು. ನನ್ನ ಬದುಕಿನಲ್ಲಿ ಅತ್ಯಮೂಲ್ಯವಾದದ್ದನ್ನ ತಿಳಿಯದೇ ಕಳೆದುಕೊಂಡು ಬಿಟ್ಟೆ. ...ಇದು ನನ್ನ ಹಣೆಯ ಬರಹ. ನಾನು ಹೀಗಿರುವುದೇ ನನಗೆ ಸಾಕು ಅನ್ನಿಸಿದೆ. ಕಳೆದದ್ದನ್ನು ಮತ್ತೆ ಪಡೆಯಲು ಸಾಧ್ಯವೇ ಇಲ್ಲ...' ಜಿಗುಪ್ಸೆಯಿಂದ ಮಾತಾಡಿದಳು.

ಸ್ವಲ್ಪ ಕಾಲ ಸುಮ್ಮನೇ ಅಲೆಗಳನ್ನು ನೋಡುತ್ತಲೇ ಕುಳಿತುಬಿಟ್ಟೆ.

ನಂತರ ಕೇಳಿದೆ 'ನನ್ನ ಮಾತು ಕೇಳ್ತೀಯಾ? ಕೇಳುವ ಸಹನೆ ಇದ್ಯಾ?'

'ಹೇಳು' ಎಂಬಂತೆ ನೋಡಿದಳು.

'ನನ್ನನ್ನ ಮದುವೆ ಆಗಿದ್ದರೆ ನೀನು ಸುಖವಾಗಿ ಇರುತ್ತಿದ್ದೆ ಅನ್ನೋದು ನಿನ್ನ ಭ್ರಮೆ. ಮೊದಲು ಅದರಿಂದ ಹೊರಗೆ ಬಾ' ಅಂದೆ. 'ಯಾಕೆ' ಎನ್ನುವಂತೆ ನೋಡಿದಳು.

'ಮನುಷ್ಯನ ಚಿಂತನೆ ಯಾವಾಗಲೂ ಹಾಗೆಯೇ ಚಲಿಸುತ್ತದೆ. ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ ...ಶ್ರದ್ಧಾಳನ್ನ ಕೇಳು... ನಾನು ಅವಳು ವಾರಕ್ಕೊಂದು ದಿನ ಒಟ್ಟಿಗೆ ಕುಳಿತು ಮಾತನಾಡಲು ಸಮಯ ಹುಡುಕುತ್ತಿರುತ್ತೇವೆ...'

'ಅಂದರೆ ನೀನು ಹೇಳೋದು...'

'ಇಲ್ಲಿ ಕೇಳು. ಕಾಲೇಜಿನ ಭ್ರಮೆಗಳು ಆಗಿನ ವಯಸ್ಸು ಆ ಕಾಲಕ್ಕೆ ಚೆನ್ನಾಗಿಯೇ ಇರುತ್ತವೆ. ಜೀವನದ ವಾಸ್ತವಕ್ಕೆ ಆ ಭ್ರಮೆಗಳು ಮಾರ್ಗ ನೀಡುವುದಿಲ್ಲ. ನಾವು ಜವಾಬ್ದಾರಿ ಇಲ್ಲದೇ ಸ್ವಚ್ಛಂದವಾಗಿ ಇರುವ ಕಾಲೇಜಿನ ಜೀವನದಲ್ಲಿ ಬೆಳೆಸಿಕೊಳ್ಳುವ ಭ್ರಮೆಗಳು, ಸುಖ ದುಃಖಗಳ ಆವೇಶಗಳೆಲ್ಲದಕ್ಕೂ ಆಯುಸ್ಸು ಬಹಳ ಕಡಿಮೆ. ಬದುಕಿನ ದಾರಿಯನ್ನು ಆವೇಶದಿಂದ ನಿರ್ಧರಿಸಿದರೆ ತಪ್ಪಾಗುತ್ತದೆ.'

'ಹೌದು... ನಿನಗೆ ಪ್ರಶಾಂತ್ ಅತ್ಯಂತ ಸರಿಯಾದ ಜೋಡಿ. ಅವನಿಗೆ ನಿನ್ನ ಮಾತು, ಮೌನ ಎರಡೂ ಪ್ರಿಯವೇ. ಅವನು ನಿನ್ನನ್ನು ಬಹಳ ಪ್ರೀತಿಸುತ್ತಾನಾದ್ದರಿಂದ ಅವನಿಗೆ ನೀನು ಹೇಗಿದ್ದರೂ ಸಂತೋಷವೇ. ಅದರಿಂದ ಅವನು ಅದರ ಕುರಿತು ಮಾತನಾಡಲ್ಲ ಅಷ್ಟೆ. ನಿನ್ನ ಚಿಂತನೆಗಳು ಸ್ವಲ್ಪ ವ್ಯತ್ಯಾಸ ಆಗಿದೆ... ಅದನ್ನು ಸರಿಪಡಿಸಿಕೊ. ಅಷ್ಟೆ.' ಸಮಾಧಾನಿಸುವಂತೆ ಹೇಳಿದೆ.

'ಆದರೆ ನಾನು ತುಂಬಾ ಸಲ ಇದೇ ರೀತಿ ಅಂದುಕೊಂಡುಬಿಟ್ಟೆ ಕಣೋ... ಅದರಿಂದ... ನಿರುತ್ಸಾಹ ಬಂದಿರೋದಂತೂ ನಿಜ.'

ಅವಳ ಬಿಚ್ಚು ನುಡಿಯಲ್ಲಿ ನನಗೆ ಬೆಳಕು ಕಂಡಿತು.

'ಇಲ್ಲಿ ಕೇಳು ಪ್ರಶ್ನಾ... ಜೀವನದಲ್ಲಿ ಅನೇಕ ರೀತಿಯ ತಿರುವುಗಳು ಬರುತ್ತವೆ. ಆದರೆ ಎಲ್ಲ ತಿರುವುಗಳನ್ನೂ ಜಯಿಸುವುದು ನಮ್ಮ ಸ್ವಭಾವ ಮಾತ್ರ. ಅದನ್ನ ಕಳೆದುಕೊಂಡರೆ ಪ್ರತಿ ತಿರುವು ಕೂಡ ಪ್ರಶ್ನಾರ್ಥಕ ಚಿಹ್ನೆಯೇ ಆಗಿಬಿಡುತ್ತೆ. ಉತ್ತರ ನೀಡುವವರು ಯಾರು?'

'ನನ್ನ ಮೌನದಿಂದ ಏನು ತೊಂದರೆ?' ಹಟ ಎಂಬಂತೆ ಕೇಳಿದಳು.

'ತೊಂದರೆ!' ನಕ್ಕೆ. 'ನಿನ್ನ ಮೌನ ಮುಂದೆ ಎಲ್ಲರಿಗೂ ಒಂದು ಆಘಾತ ನೀಡಬಾರದು ಅಲ್ಲವೇ? ಅವತ್ತು ಔಷಧಿ ಬೇಕು ಅಂದರೂ ಸಿಗದಿರಬಹುದು... ಈಗ ನೀನು ಏನನ್ನೂ ಕಳೆದುಕೊಂಡಿಲ್ಲ. ಆದರೆ ಆಮೇಲೆ ಕಳೆದುಕೊಳ್ಳುವುದು ಅತ್ಯಮೂಲ್ಯವಾದದ್ದು. ಅದರಿಂದ ಏನು ಸಾಧಿಸಿದಂತಾಯಿತು?' ಅವಳು ನನ್ನನ್ನೇ ನೋಡತೊಡಗಿದಳು.